**ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಕೆ.ಜಿ.ಬಿ.ವಿ/ಎಸ್.ಡಿ.ಎಂ.ಸಿ ರಚನೆ/2009-10

ದಿನಾಂಕ: 30-09-09

## ಸುತ್ತೋಲೆ

**ವಿಷಯ:** ರಾಜ್ಯದ ಎಲ್ಲಾ ಕೆ.ಜಿ.ಬಿ.ವಿ ಗಳಲ್ಲಿ ಎಸ್.ಡಿ.ಎಂ.ಸಿ ಗಳನ್ನು ರಚಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರಿ ಆದೇಶ ಸಂಖ್ಯೆ: ಇಡಿ.122.ಪಿ.ಬಿ.ಎಸ್2004 ಬೆಂಗಳೂರು ದಿನಾಂಕ: 14-06-06.

2. ಈ ಕಛೇರಿ ಸುತ್ತೋಲೆ ಸಂಖ್ಯೆ: ಸ.ಶಿ.ಅ/ಹೆ.ಶಿ./ಮಾ.ಸೂ/1-2009-10 ದಿ: 02-07-09

****

ಈ ಮೇಲಿನ ವಿಷಯ ಹಾಗೂ ಉಲ್ಲೇಖ-1 ರನ್ವಯ, ರಾಜ್ಯದ ಎಲ್ಲಾ ಕೆ.ಜಿ.ಬಿ.ವಿ ಗಳಲ್ಲಿ ನಿಯಮಾನುಸಾರ ಕೆ.ಜಿ.ಬಿ.ವಿ ಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯರ ಪೋಷಕರ ಪರಿಷತ್ತಿನ ಸಭೆ ಕರೆದು, ದಿನಾಂಕ: 31-10-09 ರೊಳಗೆ ಎಸ್.ಡಿ.ಎಂ.ಸಿ ಗಳನ್ನು ರಚನೆ ಮಾಡಲು ಈ ಮೂಲಕ ಆದೇಶಿಸಿದೆ. ಎಸ್.ಡಿ.ಎಂ.ಸಿ ಗಳ ರಚನೆಯ ವೇಳೆಯಲ್ಲಿ ಡಿವೈಪಿಸಿ/ಎ.ಪಿ.ಸಿ, ಬಿ.ಇ.ಓ/ಬಿ.ಆರ್.ಸಿಗಳು ಹಾಜರಿದ್ದು, ನಿಯಮಾನುಸಾರ ಎಸ್.ಡಿ.ಎಂ.ಸಿ ರಚನೆಯಾಗುವುದನ್ನು ಖಾತ್ರಿ ಪಡಿಸಿಕೊಳ್ಳುವುದು. (ಎಸ್.ಡಿ.ಎಂ.ಸಿ.ರಚನೆಯ ವಿಧಿ-ವಿಧಾನಗಳಿಗೆ ಎಸ್.ಡಿ.ಎಂ.ಸಿ. ಸಾಹಿತ್ಯ ಸಂಚಿಕೆ 'ಸ್ಪಂದನ' ವನ್ನು ನೋಡುವುದು)

ಕೆ.ಜಿ.ಬಿ.ವಿ. ಮುಖ್ಯ ಶಿಕ್ಷಕಿ ಹಾಗೂ ಎಸ್.ಡಿ.ಎಂ.ಸಿ ಅಧ್ಯಕ್ಷರ ಜಂಟಿ ಖಾತೆ ತೆರೆದು ಕೆ.ಜಿ.ಬಿ.ವಿ ಗಳಿಗೆ ಸಂಬಂಧಿಸಿದ ಎಲ್ಲ ಅನುದಾನವನ್ನು ವರ್ಗಾಯಿಸುವುದು. ಇನ್ನು ಮುಂದೆ ಎಲ್ಲಾ ಸರ್ಕಾರಿ ಶಾಲೆಗಳ ಎಸ್.ಡಿ.ಎಂ.ಸಿ.ಗಳು ಹೊಂದಿರುವ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಕೆ.ಜಿ.ಬಿ.ವಿ.ಗಳ ಎಸ್.ಡಿ.ಎಂಸಿ.ಗಳು ಹೊಂದಿವೆ. ಎಸ್.ಡಿ.ಎಂ.ಸಿ.ಗಳ ಜವಾಬ್ದಾರಿ ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದ ವಿವರಗಳಿಗಾಗಿ ಎಸ್.ಡಿ.ಎಂ.ಸಿ. ಸಾಹಿತ್ಯ ಸಂಚಿಕೆ 'ಸ್ಪಂದನ' ವನ್ನು ನೋಡುವುದು.

ಪೋಷಕರ ಪರಿಷತ್ತಿನ ಸಭೆಯಲ್ಲಿ ಎಲ್ಲ ಪೋಷಕರು ಭಾಗವಹಿಸಲು ಅನುಕೂಲವಾಗುವಂತೆ ಸಭೆಗೆ ಹಾಜರಾಗುವ ಹೊರ ಊರಿನ ಪೋಷಕರಿಗೆ ನೈಜ ಪ್ರಯಾಣ ದರವನ್ನು ನೀಡಬೇಕು ಹಾಗೂ ಪ್ರತಿ ತಿಂಗಳು ಎಸ್.ಡಿ.ಎಂ.ಸಿ ಸಭೆಯಲ್ಲಿ ಭಾಗವಹಿಸುವ ಎಸ್.ಡಿ.ಎಂ.ಸಿ ಸದಸ್ಯರಿಗೂ ಇದೇ ರೀತಿ ನೈಜ ಪ್ರಯಾಣ ದರ ನೀಡುವುದು. ಇದಕ್ಕೆ ಅಗತ್ಯವಾದ ಅನುದಾನವನ್ನು 'ಪೋಷಕರ ಸಭೆ/ಶಾಲಾ ಸಮಾರಂಭಗಳು' ಅಥವಾ 'ನಿರ್ವಹಣೆ ಹಾಗೂ ಇತರೆ ವೆಚ್ಚಗಳು' ಶೀರ್ಷಿಕೆಗಳಿಂದ ಭರಿಸುವುದು.

ಎಸ್.ಡಿ.ಎಂ.ಸಿ ಸದಸ್ಯರು ಅವರ ಜವಾಬ್ದಾರಿಗಳನ್ನು ತಿಳಿಯಲು ಜಿಲ್ಲೆಯ ಅತ್ಯುತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು, ಬಿ.ಆರ್.ಸಿ ಅಥವಾ ಕೆ.ಜಿ.ಬಿ.ವಿ ಯಲ್ಲಿ ತರಬೇತಿಯನ್ನು ನೀಡುವುದು. ತರಬೇತಿಯಲ್ಲಿ ಭಾಗವಹಿಸುವ ಎಸ್.ಡಿ.ಎಂ.ಸಿ-ಸಿ.ಎ.ಸಿ ಸದಸ್ಯರಿಗೆ ನೈಜ ಪ್ರಯಾಣ ದರ ಹಾಗೂ ಊಟ/ಚಹಾ ಖರ್ಚು ಭರಿಸುವುದು. ಇದಕ್ಕೆ ಸಾಮರ್ಥ್ಯ ಅಭಿವೃದ್ಧಿ (Capacity Building) ಶೀರ್ಷಿಕೆಯಡಿ ಲಭ್ಯವಾಗುವ ಅನುದಾನವನ್ನು ಬಳಸುವುದು.

ನಿಯಮಾನುಸಾರ ಎಸ್.ಡಿ.ಎಂ.ಸಿ ಸಭೆಯನ್ನು ಪ್ರತಿ ತಿಂಗಳು ಹಾಗೂ ಪೋಷಕರ ಪರಿಷತ್ತಿನ ಸಭೆಯನ್ನು ಮೂರು ತಿಂಗಳಿಗೊಮ್ಮೆ ಕೈಗೊಳ್ಳುವುದು.

ಮಹಿಳಾ ಸಮಖ್ಯಾ ನಿರ್ವಹಿಸಲ್ಪಡುವ ಕೆ.ಜಿ.ಬಿ.ವಿ ಗಳ ಆವರ್ತಕ ಮತ್ತು ಅನಾವರ್ತಕ ಅನುದಾನದ ವೆಚ್ಚದ ಹೊಣೆ ಹಾಗೂ ನಿರ್ವಹಣೆಯು ಈ ಹಿಂದಿನಂತೆ ಮಹಿಳಾ ಸಮಖ್ಯಾ ಸಂಸ್ಥೆಯೆ ನಿರ್ವಹಿಸಲಿದೆ ಎಂಬ ಅಂಶವನ್ನು ಸ್ಪಷ್ಟಪಡಿಸಿದೆ. ಮಹಿಳಾ ಸಮಖ್ಯಾ ನಿರ್ವಹಿಸಲ್ಪಡುವ ಕೆ.ಜಿ.ಬಿ.ವಿ ಗಳ ಎಸ್.ಡಿ.ಎಂ.ಸಿ. ಗಳು ಕಟ್ಟಡ ಕಾಮಗಾರಿ ನಿರ್ಮಾಣದ ಜವಾಬ್ದಾರಿ ಹಾಗೂ ಶಾಲೆಯ ಒಟ್ಟಾರೆ ಗುಣಾತ್ಮಕ ಅಭಿವೃದ್ಧಿಯ ಹೊಣೆಯನ್ನು ಹೊಂದಿರುತ್ತವೆ.

ಮಹಿಳಾ ಸಮಖ್ಯಾ ಸಂಸ್ಥೆ ನಿರ್ವಹಿಸುವ ಕೆ.ಜಿ.ಬಿ.ವಿ. ಹೊರತುಪಡಿಸಿ, ಇತರೆ ಕೆ.ಜಿ.ಬಿ.ವಿ.ಗಳ ಎಸ್.ಡಿ.ಎಂ.ಸಿ.ಗಳು ಕೆ.ಜಿ.ಬಿ.ವಿ.ಗೆ ಮಂಜೂರಾದ ಎಲ್ಲ ಅನುದಾನವನ್ನು ಸ.ಶಿ.ಅ.ದ ನಿಯಮಾನುಸಾರ ವೆಚ್ಚ ಮಾಡಲು ಅವಕಾಶವಿದೆ. ಅನಾವರ್ತಕ ಅನುದಾನದಲ್ಲಿ ಮಂಜೂರಾದ ಕಟ್ಟಡ, ಕಾಂಪೌಂಡ್, ಬೋರ್‌ವೆಲ್, ವಿದ್ಯುತ್ ಮತ್ತು ನೀರಿನ ವ್ಯವಸ್ಥೆ, ಪೀಠೋಪಕರಣ ಮತ್ತು ಅಡುಗೆ ಸಾಮಾನುಗಳು, ಕಲಿಕೆ-ಬೋಧನೆ ಸಾಮಗ್ರಿಗಳು ಮತ್ತು ಗ್ರಂಥಾಲಯ ಪತ್ರಿಕೆಗಳು, ಹಾಸಿಗೆ-ಹೊದಿಕೆಗಳಿಗೆ ಸಂಬಂದಿಸಿದ ಅನುದಾನವನ್ನು ವೆಚ್ಚ ಮಾಡಲು ಅವಕಾಶವಿದೆ.

ಆವರ್ತಕ ಅನುದಾನದಲ್ಲಿ ನಿರ್ವಹಣಾ ಅನುದಾನ (ಆಹಾರ ಪೂರೈಕೆ ಮತ್ತು ಇತರೆ ನಿರ್ವಹಣೆ), ವಿದ್ಯಾರ್ಥಿ ವೇತನ, ಹೆಚ್ಚುವರಿ ಕಲಿಕಾ-ಬೋದನಾ ಸಾಮಗ್ರಿಗಳು ಮತ್ತು ಶೈಕ್ಷಣಿಕ ಸಾಮಗ್ರಿಗಳು, ವೇತನ, ವೃತ್ತಿ ಶಿಕ್ಷಣ/ಜೀವನ ಕೌಶಲ, ವಿದ್ಯುತ್/ನೀರಿನ ಖರ್ಚು, ವೈದ್ಯಕೀಯ ಮತ್ತು ಇತರೆ ಖರ್ಚು, ನಿರ್ವಹಣೆ, ಪೂರ್ವಸಿದ್ಧತಾ ಶಿಬಿರಗಳು, ಪೋಷಕರ ಸಭೆ ಮತ್ತು ಶಾಲಾ

ಸಮಾರಂಭಗಳು, ಸಾಮರ್ಥ್ಯ ಅಭಿವೃದ್ಧಿ, ಬಾಡಿಗೆ (ಸ್ವಂತ ಕಟ್ಟಡವಿಲ್ಲದ ಕೆ.ಜಿ.ಬಿ.ವಿಗಳಿಗೆ ಮಾತ್ರ) ಸಂಬಂದಿಸಿದ ಅನುದಾನವನ್ನು ವೆಚ್ಚ ಮಾಡಿ, ಪ್ರಗತಿ ಸಾಧಿಸಲು ಅವಕಾಶವಿದೆ.

ಉಲ್ಲೇಖ-2 ರ ಸುತ್ತೋಲೆಯಲ್ಲಿ ಕಲಿಕೆ-ಬೋಧನೆ ಸಾಮಗ್ರಿಗಳು ಮತ್ತು ಗ್ರಂಥಾಲಯ ಪತ್ರಿಕೆಗಳನ್ನು ಖರೀದಿಸಲು ವಿವಿಧ ಸಮಿತಿಗಳನ್ನು ರಚಿಸಿ, ಸಮಿತಿಯ ಶಿಫಾರಸ್ಸಿನಂತೆ ವಸ್ತುಗಳ ಖರೀದಿ ಮಾಡಲು ಸೂಚಿಸಲಾಗಿದೆ. ಸೂಚನೆಯಲ್ಲಿರುವ ಮಾರ್ಗಸೂಚಿಯನ್ವಯ ಸಮಿತಿಗಳ ಶಿಫಾರಸ್ಸಿನಂತೆ ವಸ್ತುಗಳ ಪಟ್ಟಿಯನ್ನು ಎಸ್.ಡಿ.ಎಂ.ಸಿ. ಅನುಮೋದನೆ ಪಡೆದು, ವಸ್ತುಗಳನ್ನು ಖರೀದಿ ಮಾಡುವುದು.

ಎಸ್.ಡಿ.ಎಂ.ಸಿ ಗಳು ಕಟ್ಟಡ ಕಾಮಗಾರಿಯನ್ನು ನಿಯಮಾನುಸಾರ ಕೈಗೊಳ್ಳುವುದು. ಕಟ್ಟಡ ಪೂರ್ಣಗೊಳ್ಳದಿರುವ ಕೆ.ಜಿ.ಬಿ.ವಿ.ಗಳು ಸಹ ಅಪೂರ್ಣ ಕಟ್ಟಡವನ್ನು ಪೂರ್ಣಗೊಳಿಸಲು ಬಾಕಿ ಇರುವ ಕಾಮಗಾರಿಗೆ ಸರ್ವ ಶಿಕ್ಷಣ ಅಭಿಯಾನದ ಜಿಲ್ಲಾ ಇಂಜಿನಿಯರ್‌ರಿಂದ ಎಸ್ಟಿಮೇಟ್ ತಯಾರಿಸಿ, ಬಾಕಿ ಕಾಮಗಾರಿಯನ್ನು ಎಸ್.ಡಿ.ಎಂ.ಸಿ ಮೂಲಕ ಕೈಗೊಳ್ಳುವುದು.

2009-10 ನೇ ಸಾಲಿನಲ್ಲಿ ಮಂಜೂರಾದ ಕಟ್ಟಡ ಕಾಮಗಾರಿಯನ್ನು ಸಹ ಎಸ್.ಡಿ.ಎಂ.ಸಿ ವತಿಯಿಂದಲೇ ಕೈಗೊಳ್ಳುವುದು. ಇದೇ ರೀತಿ 2008-09 ನೇ ಸಾಲಿನಲ್ಲಿ ಮಂಜೂರಾದ ಯಾದಗಿರಿ, ಗಂಗಾವತಿ ಮತ್ತು ಸಿಂಧನೂರು ಕೆ.ಜಿ.ಬಿ.ವಿ ಗಳ ಮಾದರಿ-1 ಕೆ.ಜಿ.ಬಿ.ವಿ ಕಟ್ಟಡ ಕಾಮಗಾರಿಯನ್ನು ಎಸ್.ಡಿ.ಎಂ.ಸಿ ಯಿಂದ ನಿರ್ವಹಿಸುವುದು. ಎಸ್.ಡಿ.ಎಂ.ಸಿಗಳಿಂದ ಕಟ್ಟಲಾಗುವ ಕಟ್ಟಡಗಳ ಕಾಮಗಾರಿ ಗುಣಮಟ್ಟವನ್ನು ಕಾಪಾಡಿಕೊಳ್ಳುವುದು. ಗುಣಮಟ್ಟದ ದೂರುಗಳು ಬಂದಲ್ಲಿ ಸಂಬಂಧಿಸಿದ ಕೆ.ಜಿ.ಬಿ.ವಿ ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಅಧ್ಯಕ್ಷರು ಹೊಣೆಯಾಗುತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ಸಂಬಂಧಿಸಿದವರಿಗೆ ನೀಡುವುದು. ಕಾಮಗಾರಿ ನಿರ್ಮಾಣಕ್ಕೆ ಅಗತ್ಯವಾದ ತಾಂತ್ರಿಕ ಸಲಹೆ ಹಾಗೂ ಉಸ್ತುವಾರಿಯನ್ನು ಸ.ಶಿ.ಅ.ದ ಜಿಲ್ಲಾ ಇಂಜಿನಿಯರ್ ಮತ್ತು ಬ್ಲಾಕ್ ಇಂಜಿನಿಯರ್‌ಗಳು ಒದಗಿಸುವುದು. ಕಾಮಗಾರಿಗಳ ಗುಣಮಟ್ಟ ಸಮರ್ಪಕವಾಗಿರುವ ಬಗ್ಗೆ ಸಂಬಂಧಿಸಿದ ಬಿ.ಇ.ಓ, ಬಿ.ಆರ್.ಸಿ, ಡಿವೈ.ಪಿ.ಸಿ ಮತ್ತು ಡಿಡಿಪಿಐ ಗಳು ಕಾಲಕಾಲಕ್ಕೆ ಭೇಟಿ ನೀಡಿ ಪರಿಶೀಲಿಸುವುದು ಮತ್ತು ದೂರುಗಳು ಬರದಂತೆ ಎಚ್ಚರವಹಿಸುವುದು.

**ವಿಶೇಷ ಸೂಚನೆ :** ಎಸ್.ಡಿ.ಎಂಸಿ. ರಚನೆಗಿಂತ ಪೂರ್ವದಲ್ಲಿ ಕೆ.ಜಿ.ಬಿ.ವಿ.ಗೆ ಸಂಬಂಧಿಸಿದ ಆವರ್ತಕ ಮತ್ತು ಅನಾವರ್ತಕ ಅನುದಾನದ ವೆಚ್ಚಕ್ಕೆ ಸಂಬಂಧಿಸಿದಂತೆ ಈಗಾಗಲೆ ಪ್ರಕ್ರಿಯೆ ಪ್ರಾರಂಭವಾಗಿ, ಕಾರ್ಯಾದೇಶ ನೀಡಿದ್ದರೆ, ಅದೇ ಖರೀದಿ ಪ್ರಕ್ರಿಯೆ ಮುಂದುವರೆಸುವುದು. ಖರೀದಿ ಪ್ರಕ್ರಿಯೆ ಪ್ರಾರಂಭವಾಗದಿದ್ದಲ್ಲಿ ಎಸ್.ಡಿ.ಎಂ.ಸಿ.ಗಳ ಮೂಲಕ ಖರೀದಿ ಪ್ರಕ್ರಿಯೆ ಕೈಗೊಳ್ಳುವುದು. ಈ ಅಂಶವು ಆವರ್ತಕ ಮತ್ತು ಅನಾವರ್ತಕ ಅನುದಾನಗಳೆರಡಕ್ಕೂ (ಕಟ್ಟಡ ಕಾಮಗಾರಿ ಸೇರಿ) ಸಂಬಂಧಿಸಿದೆ. ಯಾವುದೇ ಖರೀದಿ ಪ್ರಕ್ರಿಯೆಯಲ್ಲಿ ದೂರುಗಳು ಬರದೇ ಇರುವ ರೀತಿಯಲ್ಲಿ ಸಂಬಂಧಿಸಿದ ಬಿ.ಇ.ಓ, ಬಿ.ಆರ್.ಸಿ, ಡಿವೈ.ಪಿ.ಸಿ ಮತ್ತು ಡಿಡಿಪಿಐ ಗಳು ಎಚ್ಚರವಹಿಸಲು ಸೂಚಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಇವರಿಗೆ-ಅಗತ್ಯ ಕ್ರಮಕ್ಕಾಗಿ**

1. ಉಪನಿರ್ದೇಶಕರು (ಆಡಳಿತ) ಮತ್ತು ಡಿವೈಪಿಸಿ ಬಾಗಲಕೋಟೆ, ಮೈಸೂರು, ರಾಮನಗರ, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಗುಲ್ಬರ್ಗಾ, ಹಾಸನ, ಕೋಲಾರ, ಚಿಕ್ಕಬಳ್ಳಾಪುರ, ಕೊಪ್ಪಳ, ರಾಯಚೂರು, ತುಮಕೂರು,
2. ಸಂಬಂಧಿಸಿದ ಬಿ.ಇ.ಓ., ಬಿ.ಆರ್.ಸಿ ಮತ್ತು ಕೆ.ಜಿ.ಬಿ.ವಿ ಮುಖ್ಯ ಶಿಕ್ಷಕರು

**ಮಾಹಿತಿಗಾಗಿ**

1. ಮಾನ್ಯ ಪ್ರಧಾನ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ರಸ್ತೆ, ಬೆಂಗಳೂರು-ಇವರಿಗೆ ವಂದನೆಗಳೊಂದಿಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-ಇವರಿಗೆ ವಂದನೆಗಳೊಂದಿಗೆ ಸಲ್ಲಿಸಿದೆ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ.-ಅಗತ್ಯ ಅನುಪಾಲನಾ ಕ್ರಮಕ್ಕಾಗಿ
4. ರಾಜ್ಯ ಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಮಖ್ಯಾ, #631, 22 ನೇ ಮೇನ್ ರೋಡ್, ಬಿ.ಎಂ.ಟಿ.ಸಿ, ಬಸ್ ಡಿಪೋ ಹತ್ತಿರ, 4 ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು.
5. ಕಾರ್ಯಪಾಲಕ ಅಭಿಯಂತರರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
6. ಮುಖ್ಯ ಲೆಕ್ಕಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
7. ಈ ಕಛೇರಿಯ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಸೂಕ್ತ ಅನುಪಾಲನಾ ಕ್ರಮಕ್ಕಾಗಿ